

## ಅನಾಥ ಸ್ಥಿತಿಯಲ್ಲಿ ಭಗ್ನ ಫಿರಂಗಿ!

ಚಿತ್ರದುರ್ಗದ ವಿಶ್ವಪ್ರಸಿದ್ಧ ಏಳು ಸುತ್ತಿನ ಕೋಟೆಯ ಹೊರ ಆವರಣದ ವಾಯು ವಿಹಾರ ರಸ್ತೆ ಸನಿಹ ರಾಜಾಡಳಿತ ಕಾಲಘಟ್ಟದ ಭಗ್ನಗೊಂಡ ಫಿರಂಗಿಯೊಂದು ಅನಾಥವಾಗಿ ಬಿದ್ದಿದ್ದರೂ ಪ್ರವಾಸಿಗರ ಗಮನಸೆಳೆಯುತ್ತಿದೆ. ನೋಡುಗರಿಗೆ ಅದು ರಾಜಾಡಳಿತ ಕಾಲದ ಚರಿತ್ರೆಯನ್ನು ನೆನಪಿಸುತ್ತಿದೆ. ಆದರೆ, ಆ ಫಿರಂಗಿಯು ಯಾವ ರಕ್ಷಣೆ ಇಲ್ಲದೆಯೂ ಅನಾಥವಾಗಿ ಬಿದ್ದಿದೆ. ಇದು ಐತಿಹಾಸಿಕ ವಸ್ತುಗಳ ಸಂರಕ್ಷಣೆ ಮಾಡುವ ಶೋಚನಿಯ ಸ್ಥಿತಿಯನ್ನು ತೋರುತ್ತದೆ. ಪ್ರಾಚ್ಯವಸ್ತುಗಳ ಸಂರಕ್ಷಣಾ ಇಲಾಖೆಯೂ ಈ ಭಗ್ನಗೊಂಡ ಫಿರಂಗಿಯನ್ನು ಸಂರಕ್ಷಿಸಿ, ಆಯಕಟ್ಟಿನ ಸ್ಥಳದಲ್ಲಿ ಆರೋಗ್ಯಕರವಾಗಿ ಪೀಠದ ಮೇಲಿಟ್ಟು, ಫಿರಂಗಿಯ ಬಗ್ಗೆ ಫಲಕದಲ್ಲಿ ಮಾಹಿತಿ ನೀಡಿದರೆ, ಇತಿಹಾಸ ಅಧ್ಯಯನಕಾರರಿಗೆ, ಪ್ರವಾಸಿಗರಿಗೆ, ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಉತ್ತಮ ಮಾಹಿತಿ ಲಭ್ಯವಾಗುತ್ತದೆ. ಈ ಬಗ್ಗೆ ಪ್ರಾಚ್ಯವಸ್ತು ಇಲಾಖೆಯು ಅಗತ್ಯವಾಗಿ ಚಿಂತಿಸಬೇಕಾಗಿದೆ.

—ತಾರಾನಾಥ್ ಮೇಸ್ತ ಶಿರೂರು, ಉಡುಪಿ

## ಸೌತೆಕಾಯಿಯ ರಕ್ಷಣಾ ವ್ಯವಸ್ಥೆ

ಸೌತೆಕಾಯಿಯನ್ನು ಪೇಟೆಯಿಂದ ತರೋದು, ಅಡುಗೆ ಮಾಡೋದು, ತಿನ್ನೋದು. ಬಳಸುವುದು ಎರಡು ದಿನ ಲೇಟ್ ಆದ್ರೆ ಸೌತೆಕಾಯಿ ಹಾಳಾಗುತ್ತದೆ. ಇತ್ತೀಚೆಗೆ ಹಳ್ಳಿ ಮನೆಯೊಂದಕ್ಕೆ ಭೇಟಿಕೊಟ್ಟಾಗ ಸೌತೆಕಾಯಿಗಳನ್ನು ವಿಶೇಷವಾಗಿ ಸಂರಕ್ಷಣೆ ಮಾಡಿ ಸುಮಾರು 4 ತಿಂಗಳವರೆಗೆ ಕಾಪಿಡುವ ಪದ್ಧತಿಯನ್ನು ಕಂಡೆ. ಆ ಬಗ್ಗೆ ಮನೆಯ ಹಿರಿಯರು ತಿಳಿಸಿಕೊಟ್ಟರು. ಮನೆಯ ಚಾವಡಿಯಲ್ಲಿ ಮರದ ಎರಡು ರೀಪು ಉದ್ದಕೆ ಹೊಡೆದು ಅದರಲ್ಲಿ ಸೌತೆ ಇಡಲಾಗುತ್ತದೆ. ಹೀಗೆ ಇಟ್ಟ ಸೌತೆಕಾಯಿ 4 ತಿಂಗಳು ಉಳಿಯುತ್ತವೆಯಂತೆ.

—ಅಶ್ವಿನಿ ಮೂರ್ತಿ ಅಯ್ಯನಕಟ್ಟೆ, ಸುಳ್ಯ



## ಹಕ್ಕಿಗಳ ದಂಡಿಗೆ ದಾರದ ಸಂಕೋಲೆ!

ಈ ಚಿತ್ರವನ್ನು ಒಮ್ಮೆಲೆ ನೋಡಿದರೆ ಬೇಟೆಗಾರನೊಬ್ಬ ಜೀವಂತ ಹಕ್ಕಿಗಳನ್ನು ಹಿಡಿದು ಅವುಗಳಿಗೆ ದಾರ ಕಟ್ಟಿ ಮಾರಲು ಹೊರಟಿದ್ದಾನೆ ಎಂದು ಭಾಸವಾಗಿತ್ತು. ಆದರೆ, ಕ್ಷಣ ನಿಂತು ದಿಟ್ಟಿಸಿ ನೋಡಿದರೆ ಇವು ಜೀವಂತ ಹಕ್ಕಿಗಳಲ್ಲ ನಿರ್ಜೀವವು ಎನ್ನುವುದು ಅರಿವಾಗುತ್ತದೆ. ಕೆಲವೆಡೆ ಸಾಕಷ್ಟು ಮಂದಿ ಜೀವಂತ ಹಕ್ಕಿಗಳನ್ನು ಹಿಡಿದು ಮಾರಾಟ ಮಾಡುವುದನ್ನು ಕೆಲ ರಸ್ತೆಗಳ ಬದಿಯಲ್ಲಿ ಕಾಣುತ್ತೇವೆ. ಇನ್ನೂ ಕೆಲವರು ಹಕ್ಕಿಗಳನ್ನು ಹಿಡಿದು ತಿನ್ನುತ್ತಾರೆ. ಇಂತಹದ್ದಕ್ಕೆ ಕಡಿವಾಣ ಹಾಕಬೇಕಿದೆ.

—ದೇವಿದಾಸ ಸುವರ್ಣ, ಅಂಕೋಲಾ

